‘ಮಾನಸಿ’ ರಾಗ

ಎಲ್ಲೆಲ್ಲೂ ಸಂಗೀತವೇ

■ ಶ್ರೀಕಲಾ ಡಿ.ಎಸ್



¶¾ßÒ¥Á @ÈßÂÒ¥ ¶ÔßÁÛ Ï ¶¾ß ÒM®¬¾ß D«-} Ôß¥¾àM¥ÁÆ Òàn G{Ñß}Û ¶¥ßÒ¶Ôß¦}ß. A¥Á ÈáÛ«Ò ®ãn{Ò¥ß ÑMWn}¥ ÁÛVV×«ß-. ÈáÛ«ÒV ÑMWn}Èn ¶¥ßÒß.

ವಿದೇಶದಲ್ಲಿ ಕೋಟಿ ಲೆಕ್ಕದಲ್ಲಿ ಸಿಗುವ ಸಂಬಳ, ಸ್ಟಾರ್ ಹೊಟೇಲಿನ ಸುಖದ ಸುಪ್ಪತ್ತಿಗೆಯನ್ನು ಬೇಡವೆಂದರೂ ಸವಿಯುವ ಅವಕಾಶ, ಸಾಮಾನ್ಯರು ಸಿನಿಮಾದಲ್ಲಷ್ಟೇ ಕಾಣಲು ಸಾಧ್ಯವಾದ ವೈಭವೋಪೇತ ಜೀವನಶೈಲಿ, ಮಿರುಗುವ ಬಣ್ಣದ ಲೋಕ... ಸ್ವರ್ಗಕ್ಕೆ ಕಿಚ್ಚು ಹಚ್ಚಲು ಇಷ್ಟು ಸಾಲದೇ?

‘ಆದರೆ ನನ್ನ ಮನಸ್ಸು ತುಡಿಯುತ್ತಿದ್ದುದು ಕೇವಲ ಸಂಗೀತ, ಸಂಗೀತ ಮತ್ತು ಸಂಗೀತದೆಡೆಗೆ’ ಎನ್ನುತ್ತಲೇ ಮಾತಿಗೆ ಶುರುವಿಡುತ್ತಾರೆ ಕರ್ನಾಟಕ ಸಂಗೀತ ಮತ್ತು ಭರತನಾಟ್ಯ ಎರಡರಲ್ಲೂ ಅಪೂರ್ವ ಸಾಧನೆ ಮಾಡಿರುವ ಮಾನಸಿ ಪ್ರಸಾದ್.

ಬಯಸಿದ್ದರೆ ಅಮೆರಿಕದ ಬಹುರಾಷ್ಟ್ರೀಯ ಕಂಪನಿಯ ಉನ್ನತ ಹುದ್ದೆಯೊಂದರಲ್ಲಿ ಕೋಟಿ ಎಣಿಸುತ್ತಾ ಬದುಕಬಹುದಿತ್ತು. ಆದರೆ ಮಾನಸಿ ಪೋಣಿಸಿದ್ದು ಸಂಗೀತದ ರಾಗಗಳನ್ನು. ಮಾನಸಿಗೆ ಸಂಗೀತವೇ ಬದುಕು.

ಮಾನಸಿ ಸ್ಲೇಟು ಹಿಡಿಯುವ ಮುನ್ನ ಶ್ರುತಿ ಹಿಡಿದಾಕೆ. ಹುಟ್ಟಿದ್ದು, ಪ್ರಾಥಮಿಕ ಶಿಕ್ಷಣ ಎಲ್ಲಾ ಕುವೈತ್‌ನಲ್ಲಿ. ಸಂಗೀತ ವಾತಾವರಣದಲ್ಲಿ ಬೆಳೆದ ಹುಡುಗಿಗೆ ಅಮ್ಮ ತಾರಾ ಪ್ರಸಾದ್ ಪ್ರಥಮ ಗುರು. ಬೆಳಗು ಆರಂಭಗೊಳ್ಳುವುದೇ ‘ಅ’ಕಾರ ಸಾಧನೆಯ ಮೂಲಕ. ಅಕ್ಕ ಸ್ಮಿತಾ ಪ್ರಸಾದ್ ಮತ್ತು ಮಾನಸಿ ಜೊತೆಯಾಗಿ ಸ...ಪ...ಸ... ಶುರು ಮಾಡಿದರೆ ಇತ್ತಲಿನ ಲೋಕದ ಪರಿವೆಯೇ ಇಲ್ಲ. ಅಲ್ಲಿಂದ ಶುರುವಾಯಿತು ಸಂಗೀತ ಬದುಕು. ಕೂತಲ್ಲಿ, ನಿಂತಲ್ಲಿ, ನಡೆದಲ್ಲಿ... ಮೂರು ಹೊತ್ತೂ ಸಂಗೀತ. ಮೂರೂವರೆ ವರ್ಷದಲ್ಲೇ ವೇದಿಕೆಯೇರುವ ಅವಕಾಶ. 5ನೇ ವರ್ಷದಿಂದ ಸಂಗೀತದ ಜೊತೆ ಭರತನಾಟ್ಯ ಕಲಿಕೆಯೂ ಆರಂಭ.

ಕುವೈತ್‌ನಿಂದ 1990ರಲ್ಲಿ ರಜಾ ದಿನ ಕಳೆಯಲು ಮಾನಸಿ ಕುಟುಂಬ ಬೆಂಗಳೂರಿಗೆ ಬಂತು. ಆಗಲೇ ಕಥೆಯಲ್ಲಿ ಸಣ್ಣ ತಿರುವು ಕಾಣಿಸಿಕೊಂಡಿದ್ದು. ಗಲ್ಫ್ ಯುದ್ಧ ಶುರುವಾಗಿದ್ದೂ ಆಗಲೇ. ಯುದ್ಧ ಮುಕ್ತಾಯ ಆಗುವ ತನಕ ಇಲ್ಲೇ ಉಳಿಯುವ ಯೋಚನೆ ಮಾಡಿತು ಮಾನಸಿ ಫ್ಯಾಮಿಲಿ.

‘ಒಂದು ರೀತಿಯಲ್ಲಿ ಅದು ನನ್ನ ಕಲೆಗೆ ಸಹಾಯವನ್ನೇ ಮಾಡಿತು. ಇಲ್ಲಿ ಬಿಷಪ್ ಕಾಟನ್ ಸೇರಿದೆ. ಸಂಗೀತವನ್ನು ಜಾಹ್ನವಿ ಜಯಪ್ರಕಾಶ್ ಮತ್ತು ನೃತ್ಯವನ್ನು ನರ್ಮದಾ ಅವರಿಂದ ಕಲಿಯಲಾರಂಭಿಸಿದೆ.

2 ನೇ ಪುಟಕ್ಕೆ

ಫೋಟೋ: ಸುರೇಶ್ ನಂಬೂದಿರಿ

ಸ್ಲಂಬಾಲೆಯರ ಕಾಫಿ ಹೌಸ್

GÂs OÛy¶ÁßEM¢ NÛEáÛ«Á OÛ² ÒèÑé B¥Ä. BÆ ÒcmÒé "Ò±sþ'¾ßM} ÏÏÚAÛEß ÒßÒ%V×ß, n®émÛ®èÑàmé ¨ AÒ¥ ÑÈ%ÁéV×ß, HÁé QMtÞÏ¬MVé ¬ÈßV OÛy¥ß. B¥ß D«-}àÞ¥ÞË¦M¥ NÛ }ÈÛ¥ OÛ²ÒèÑé. ÈßÒ×ß Ñ¶ÆÞÒÁyÈÞ BÆ« ÈßM}Ä.

ಕಾಫಿಗೆ ಆರ್ಡರ್ ಮಾಡಿ ಯಾರೋ ಬಂದು ಟೇಬಲ್ ಮೇಲೆ ಲೋಟ ಕುಕ್ಕುತ್ತಾನೆ ಎಂದು ಕಾಯುತ್ತಿದ್ದೀರಾ? ಹಾಗಿದ್ದರೆ, ಮೆತ್ತಗೆ ಬಂದು ಮೇಜಿನ ಮೇಲೆ ಕೂರುವ ಕಾಫಿ ನಿಮ್ಮ ನಿರೀಕ್ಷೆ ಹುಸಿ ಮಾಡುತ್ತದೆ. ಇದೇ ಅಚ್ಚರಿಯಿಂದ ಆ ಕಾಫಿಯನ್ನು ನೀವು ತುಟಿಗಿಟ್ಟಾಗಲೂ ಆ ನಾಜೂಕಿನ ಆತಿಥ್ಯದ ಸವಿಯೋ ಎಂಬಂತೆ ಅದು ಮತ್ತಷ್ಟು ಮಧುರವಾಗಿರುತ್ತದೆ. ಹೌದು, ಇದು ಹುಡುಗಿಯರ ಕಾಫಿ ಹೌಸ್.

ಇಲ್ಲಿ ಕಾಫಿಯನ್ನು ಮಹಿಳೆಯರೇ ಸರ್ವ್ ಮಾಡುತ್ತಾರೆ. ಅವರೇ ನಿಮ್ಮೆದುರು ಕಾಫಿ ತಯಾರಿಸುತ್ತಾರೆ. ಜತೆಗೆ ಬೇಕರಿ ತಿನಿಸುಗಳನ್ನೂ ಮಾಡುತ್ತಾರೆ. ಇಲ್ಲಿ ಎಲ್ಲವೂ ಮಹಿಳೆಯರದೇ ಕಾರುಬಾರು. ಕಾಫಿ ಹೌಸ್‌ನಲ್ಲಿ ಕಾಫಿ ತಯಾರಿಸುವುದರಿಂದ ಹಿಡಿದು, ಸರ್ವಿಂಗ್, ನಿರ್ವಹಣೆ ಎಲ್ಲವೂ ಮಹಿಳೆಯರದೇ. ಅದಕ್ಕೂ ಅಚ್ಚರಿಯೆಂದರೆ ಇದು ‘ಸ್ಲಂಬಾಲೆ’ಯರ ಕಾಫಿ ಹೌಸ್!

ಹೌದು. ಎಲ್ಲೆಡೆ ಕಾಣಬರುವಂಥ ಸಾಮಾನ್ಯ ಕಾಫಿ ಹೌಸ್ ಇದಲ್ಲ. ಇಲ್ಲಿ ಹೈಟೆಕ್ ‘ಕೆಫೆಡೇ’ಯಂತೆ ಐಷಾರಾಮಿ ಕುರ್ಚಿಗಳು, ಟಿಪ್‌ಟಾಪ್ ಸೂಟ್ ಧರಿಸಿದ ಸರ್ವರ್‌ಗಳು, ಏರ್ ಕಂಡೀಷನಿಂಗ್ ನಿಮಗೆ ಕಾಣದು. ಇದು ಉನ್ನತೋದ್ದೇಶದಿಂದ ಸ್ಥಾಪಿತವಾದ ಕಾಫಿಹೌಸ್. ಮಹಿಳಾ ಸಬಲೀಕರಣವೇ ಇಲ್ಲಿನ ಮಂತ್ರ. ಅದರಲ್ಲೂ ಕೊಳಚೆ ಪ್ರದೇಶದ ಮಹಿಳೆಯರಿಗೆ ಬಾಳು ದೊರಕಿಸಿಕೊಡುವ ಒಂದು ವಿಶಿಷ್ಟ ಪ್ರಯತ್ನ.

ಮೈಸೂರಿನ ಪ್ರಸಿದ್ಧ ಪ್ರೀಮಿಯರ್ ಸ್ಟುಡಿಯೋದ ಆವರಣದಲ್ಲಿರುವ ಕಟ್ಟಡವನ್ನು‘ದಿ ಗ್ರೀನ್ ಹೋಟೆಲ್’ ಆಗಿ ಪರಿವರ್ತಿಸಲಾಗಿದೆ. ಅಲ್ಲಿ ಈ ಪುಟ್ಟ, ಚೊಕ್ಕ ಕಾಫಿ ಹೌಸ್ ಸ್ಥಾಪಿತವಾಗಿದೆ. ಹೆಸರು ‘ದಿ ಮಾಲ್ಗುಡಿ ಕಾಫಿ ಶಾಪ್ ಅಂಡ್ ಬೇಕರಿ’. ಆರ್.ಕೆ.ನಾರಾಯಣ್ ಅವರ ‘ದಿ ಮಾಲ್ಗುಡಿ ಡೇಸ್’ ಕಥಾಸಂಕಲನದಿಂದ ಪ್ರಭಾವಿತವಾಗಿ ಕಾಫಿ ಹೌಸ್‌ಗೆ ಈ ಹೆಸರು ಬಂದಿದೆ. ಬ್ರಿಟನ್‌ನಲ್ಲಿರುವ ದ ಗ್ರೀನ್ ಹೋಟೆಲ್ ನಿರ್ದೇಶಕರಲ್ಲೊಬ್ಬರಾದ ಡೇಮ್ ಹಿಲರಿ ಬ್ಲೂಮ್ ಈ ಕಾಫಿ ಹೌಸ್ ಸ್ಥಾಪಿಸಿ ಸ್ಲಂ ಮಹಿಳೆಯರಿಗೆ ಕೆಲಸ ಕೊಟ್ಟಿದ್ದಾರೆ.

ದ ಚಾಪ್ಟರ್ ಬಿಗಿನ್ಸ್!

‘ನಾನು ವಸಂತ ನಗರ ಕೊಳಚೆ ಪ್ರದೇಶದವಳು. ಮನೆಗೆಲಸ ಮಾ–ಡಿಕೊಂಡಿದ್ದೆ. ತಿಂಗಳ ಸಂಬಳ ಸಾಲುತ್ತಿರಲಿಲ್ಲ. ಮನೆಗೆಲಸ, ಪಾತ್ರೆ ತೊಳೆಯುವುದು, ಮನೆ ಗುಡಿಸಿ ಒರೆಸುವುದು, ಮಾಲೀಕರಿಂದ ಬೈಸಿಕೊಳ್ಳುವುದರಲ್ಲೇ ಮುಗಿಯುತ್ತಿತ್ತು. ಆದರೆ ಇಲ್ಲಿ ಕೆಲಸ ಸಿಕ್ಕಿತು. ಎಸ್‌ಎಸ್‌ಎಲ್‌ಸಿ ಫೇಲ್ ಆಗಿದ್ದೆ. ಈಗ ಅದಕ್ಕೂ ಓದುತ್ತಿದ್ದೇನೆ. ಈಗಿನದು ಸ್ವಾಭಿಮಾನದ ಕೆಲಸ’– ಈ ಮಾತು ಮಾಲ್ಗುಡಿಯಲ್ಲಿ ಕೆಲಸ ಮಾಡುವ ಗೌರಿಯದು. ಈಕೆಯಂತೆ ಇಲ್ಲಿ ಇನ್ನೂ 11 ಮಂದಿಯಿದ್ದಾರೆ. ಎಲ್ಲರದೂ ಇದೇ ಅಭಿಪ್ರಾಯ. ಎಲ್ಲ ಸೌಲಭ್ಯಗಳೊಂದಿಗೆ ಪೂರ್ಣಾವಧಿ ಕೆಲಸ, ಹೆಚ್ಚು ಸಂಬಳವೂ ಸಿಗುತ್ತದೆ.

ಮಹಿಳಾ ಸಬಲೀರಕಣ:

ಹಿಲರಿ ಬ್ಲೂಮ್ ಅವರೊಂದಿಗೆ ದಿ ಗ್ರೀನ್ ಹೋಟೆಲ್‌ನ ಇತರ ನಿರ್ದೇಶಕರಾದ ಸ್ಟಾನ್ ಥೆಕಾಕರ್, ಮೇರಿ ಥೆಕಾಕರ್, ಬ್ರಿಜ್ ಬಿಜ್‌ಸಾವ್ ಈ ಕಾಫಿ ಹೌಸ್ ಶುರುಮಾಡಿದ್ದಾರೆ. ಬ್ರಿಟನ್‌ನ ‘ಚಾರಿಟೀಸ್ ಅಡ್ವೀಸರಿ ಟ್ರಸ್ಟ್’ಗೆ ಎಲ್ಲ ಮಾಲ್ಗುಡಿಯ ಲಾಭ ಹೋಗುತ್ತದೆ. ಜತಗೆ ಸರ್ಕಾರಕ್ಕೆ ತೆರಿಗೆ. ಕಾಫಿ ಹೌಸೊಂದನ್ನು ಪ್ರಾರಂಭಿಸಿ ಆ ಮೂಲಕ ಮಹಿಳಾ ಸಬಲೀಕರಣ ಮಾಡಬೇಕೆಂಬ ಆಲೋಚನೆ ಬಂದಿತಂತೆ.

2 ನೇ ಪುಟಕ್ಕೆ